# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ನಗರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-232015,
ಮೊಬೈಲ್: 9448994845
ಫ್ಯಾಕ್ಸ್: 08232-233600
ಇ-ಮೇಲ್: aee_maddur@rediffmail.com

ಕ್ರಮಾಂಕ:ಸಕಾನಿಇಂ(ವಿ)/ಸಲೆಅ/ಕಾ&ಪಾ,ನಉವಿ/ಮದ್ದೂರು-1/2019-20/ 17-69-74 ದಿನಾಂಕ: 17 AUG 2019
ಲಗತ್ತು:

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ., ವಿಭಾಗ ಕಛೇರಿ, ಮದ್ದೂರು ರವರ ಅಧ್ಯಕ್ಷತೆಯಲ್ಲಿ ಉಪವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ:07.08.2019 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ನಗರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರ ವಿವರ:

| ಕ್ರ ಸಂ | ಅಧಿಕಾರಿ / ಸಿಬ್ಬಂದಿ | ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ರವಿಶಂಕರ್ | ಕಾ ನಿ ಇಂ(ವಿ) | ಮದ್ದೂರು ವಿಭಾಗ |
| 2 | ಶ್ರೀ ಎಸ್.ರಾಜೇಂದ್ರ | ಸ ಕಾ ಇಂ(ವಿ) | ಮದ್ದೂರು ನಗರ ಉಪವಿಭಾಗ |
| 3 | ಶ್ರೀ ಜಿ.ಮೋಹನ್ | ಸ ಕಾ ಇಂ(ವಿ) | ಮದ್ದೂರು ಗ್ರಾಮಾಂತರ ಉಪವಿಭಾಗ |
| 4 | ಶ್ರೀ ಎನ್.ನಾಗರಾಜು | ಸಹಾಯಕ ಲೆಕ್ಕಾಧಿಕಾರಿ | ಮದ್ದೂರು ವಿಭಾಗ |
| 5 | ಕು. ರಾಖಿ ಆರ್. | ಸಹಾಯಕ ಲೆಕ್ಕಾಧಿಕಾರಿ | ಮದ್ದೂರು ನಗರ ಉಪವಿಭಾಗ |
| 6 | ಶ್ರೀಮತಿ ಎಸ್.ಸುವರ್ಣ | ಸ ಇಂ(ವಿ) ತಾಂತ್ರಿಕ | ಮದ್ದೂರು ನಗರ ಉಪವಿಭಾಗ |
| 7 | ಶ್ರೀ ಎಂ.ಪಿ ಪ್ರಕಾಶ್ | ಸ ಇಂ(ವಿ) | ಪಟ್ಟಣ ಶಾಖೆ, ನಗರ ಉಪವಿಭಾಗ ಮದ್ದೂರು |
| 8 | ಶ್ರೀ ಮೊಹಮ್ಮದ್ ಸಲ್ಲಾವುದ್ದೀನ್ ಖಾನ್ | ಸ ಇಂ(ವಿ) | ಕಾ & ಪಾ ಘಟಕ-1, ನಗರ ಉಪವಿಭಾಗ ಮದ್ದೂರು |
| 9 | ಶ್ರೀ ರಾಮಚಂದ್ರ ಹೆಚ್.ಸಿ. | ಕಿ ಇಂ(ವಿ) | ಸೋಮನಹಳ್ಳಿ ಶಾಖೆ, ನಗರ ಉಪವಿಭಾಗ ಮದ್ದೂರು |
| 10 | ಶ್ರೀ ಆರ್.ಪ್ರಕಾಶ್ | ಪ್ರ ಕಿ ಇಂ(ವಿ) | ಗೆಜ್ಜಲಗೆರೆ ಶಾಖೆ, ನಗರ ಉಪವಿಭಾಗ ಮದ್ದೂರು |
| 11 | ಶ್ರೀ ಹೆಚ್.ಎಂ.ಮಹೇಶ್ ಕುಮಾರ್ | ಹಿರಿಯ ಸಹಾಯಕ | ಮದ್ದೂರು ನಗರ ಉಪವಿಭಾಗ |
| 12 | ಶ್ರೀ ಎಸ್.ರಾಜೇಶ್ | ಕಿ ಇಂ(ವಿ) | ಕೆ.ಎಂ.ದೊಡ್ಡಿ ಶಾಖೆ-1, ನಗರ ಉಪವಿಭಾಗ ಮದ್ದೂರು |
| 13 | ಶ್ರೀ ದಿವಾಕರ್ | ಪ್ರ ಕಿ ಇಂ(ವಿ) | ಕೆ.ಎಂ.ದೊಡ್ಡಿ ಶಾಖೆ-2, ನಗರ ಉಪವಿಭಾಗ ಮದ್ದೂರು |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ವಿಭಾಗ ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಯಿಸಿ ಉತ್ತರಿಸಲಾಯಿತು.

ಮೊದಲನೆಯದಾಗಿ ಶ್ರೀ ಎಸ್.ರಾಜೇಂದ್ರ ಸ.ಕಾ.ನಿ.ಇಂ(ವಿ) ನಗರ ಉಪವಿಭಾಗ ರವರು ಹಿಂದಿನ ಜನಸಂಪರ್ಕ ಸಭೆಯ ನಡಾವಳಿ ಹಾಗೂ ತೆಗೆದುಕೊಂಡ ಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ವಿವರಣೆ ನೀಡಿದರು. ಇದಕ್ಕೆ ಪೂರಕವಾಗಿ ಕಾ.ನಿ.ಇಂ(ವಿ)ರವರು ಸವಿಸ್ತಾರವಾಗಿ ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರಣೆ ನೀಡಿದರು.

ಪು.ತಿ.ನೋ...

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | **ಗ್ರಾಹಕರು – ಶ್ರೀ ಪ್ರತಾಪ್.ಕೆ ಶಿವಪುರ 9740379364** | |
| 1 | ಐ.ಪಿ ಸ್ಥಾವರವು ಚಾಮನಹಳ್ಳಿ ಆಶ್ರಯ ಬಡಾವಣೆ ಹತ್ತಿರ ಇದ್ದು ಎನ್.ಜೆ.ವೈ ಫೀಡರ್ ಮೇಲೆ ಇರುವುದರಿಂದ Timer Control ಹಾಕಿಕೊಟ್ಟು ಸಂಪರ್ಕ ಕಲ್ಪಿಸಿಕೊಡಲು ಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಮ್ಮ ಸ್ಥಾವರವಿರುವ ಮಾರ್ಗದಲ್ಲಿರುವ ಬೇರೆ ಐ.ಪಿ ಸ್ಥಾವರಗಳನ್ನು ಒಟ್ಟುಗೂಡಿಸಿ ಪ್ರತ್ಯೇಕ ಐ.ಪಿ. ಮಾರ್ಗ ತಯಾರಿಸಿ ಸಂಪರ್ಕ ಕಲ್ಪಿಸಲು ಮೇಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. |
| | **ಗ್ರಾಹಕರು– ಶ್ರೀ ರಘು ಚನ್ನಸಂದ್ರ 9844643538** | |
| 2 | ಎನ್.ಜೆ.ವೈ ಫೀಡರ್ ಮಾಡುವಾಗ ತೆಂಗಿನ ಮರಕ್ಕೆ ಹತ್ತಿರದಲ್ಲಿ ಹಾದು ಹೋಗುವಂತೆ ತೆಗೆದು ಕೊಂಡಿದ್ದು, ಮರಗಳಿಗೆ ಬೆಂಕಿ ತಗಲುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸ್ವಲ್ಪ ದೂರದಲ್ಲಿ ಹಾಕಲು ಕೋರಲಾಗಿರುತ್ತದೆ. ಆದರೆ ಅಲ್ಲೇ ಎಳೆಯಲಾಗಿದೆ. ಆದ್ದರಿಂದ AB Cable ಅಳವಡಿಸಿಕೊಡಲು ಕೋರಿದರು. ಹಾಗು ಜೊತೆಗೆ ಕಬ್ಬು ಇರುವುದರಿಂದ ಸ್ಪರ್ಶ ಆದರೆ ಬೆಂಕಿಗಾಹುತಿ ಹಾಗುವ ಸಂಭವವಿರುತ್ತದೆ ಎಂದು ಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು AEE ಯವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದರು. |
| | **ಗ್ರಾಹಕರು– ಶ್ರೀ ಜೋಗಿಗೌಡ ಚಿಕ್ಕರಸಿನಕೆರೆ 9663294777** | |
| 3 | ಐ.ಪಿ. ಸ್ಥಾವರಕ್ಕೆ ಅಕ್ರಮ ಸಕ್ರಮ ಯೋಜನೆಯಡಿ ಮೊತ್ತವನ್ನು ಪಾವತಿಸಿದ್ದು ಈವರೆಗೆ ಸಂಪರ್ಕ ಕಲ್ಪಿಸಿರುವುದಿಲ್ಲ ಎಂದು ತಿಳಿಸಿದರು. | ಇದಕ್ಕೆ ಪ್ರತಿಕ್ರಿಯಿಸಿ 2017 ರಲ್ಲಿ ತಾವು ಪಾವತಿಸಿರುವುದರಿಂದ ಜೇಷ್ಠತೆ ಆಧಾರದ ಮೇಲೆ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಹಾಗು ಐ.ಪಿ. ಫೀಡರ್ ನಿಂದ 1 ½ ಕಿ.ಮಿ ಇರುವುದರಿಂದ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು. |
| 4 | ಯಾವುದೇ ಜನಸಂಪರ್ಕ ಸಭೆಗೆ ಅಧೀಕ್ಷಕ ಇಂಜಿನಿಯರ್ (ವಿ), ರವರು ಸಭೆಗೆ ಹಾಜರಾಗಿರುವುದಿಲ್ಲ ಅವರ ಮಟ್ಟದಲ್ಲಿ ಅಗಬೇಕಾದ ಕೆಲಸಗಳನ್ನು ಕೇಳಬೇಕಿತ್ತು ಆದರೆ ಸಭೆಗೆ ಹಾಜರಾಗದಿರುವುದನ್ನು ಖಂಡಿಸುತ್ತೇನೆ. | ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು, ಅಧೀಕ್ಷಕ ಇಂಜಿನಿಯರ್(ವಿ) ರವರು ಅನಾರೋಗ್ಯದ ನಿಮಿತ್ತ ಸಭೆಗೆ ಹಾಜರಿರುವುದಿಲ್ಲ. ಸದರಿ ವಿಷಯದ ಬಗ್ಗೆ ಅ.ಇಂ(ವಿ) ರವರ ಬಳಿ ಚರ್ಚಿಸಲಾಗುವುದು ಎಂದು ತಿಳಿಸಲಾಯಿತು. |
| | **ಗ್ರಾಹಕರು– ತಾಯಮ್ಮ ಗುರುದೇವರಹಳ್ಳಿ 9343059388** | |
| 5 | 2017 ರಲ್ಲಿ RUIP ಯೋಜನೆಯಡಿ ಮೊತ್ತ ಪಾವತಿಸಿದ್ದು ಸಂಪರ್ಕ ಕಲ್ಪಿಸಿಕೊಡಲು ಕೋರಲಾಯಿತು. | ಶಾಖಾಧಿಕಾರಿಯವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು. |
| | **ಗ್ರಾಹಕರು– ಸಿ.ಹೆಚ್. ರಾಮಯ್ಯ ಚಾಮನಹಳ್ಳಿ 9620383098** | |
| 6 | RUIP ಯಡಿ ಸಂಪರ್ಕ ಪಡೆದಿರುತ್ತೇನೆ. ಆದರೆ ಈ ಟಿ.ಸಿ.ಮೇಲೆ ಆಗತ್ಯಕ್ಕಿಂತ ಹೆಚ್ಚಿಗೆ ಜನರು ಸಂಪರ್ಕ ಕಲ್ಪಿಸಿರುವುದರಿಂದ ಓವರ್ ಲೋಡ್ ಆಗುತ್ತದೆ. ಹಾಗು ಮೊತ್ತ ಪಾವತಿಸದೆ ಇರುವುದರಿಂದ ಅನಧಿಕೃತ ಸಂಪರ್ಕಗಳನ್ನು ನಿಮ್ಮ ಸಿಬ್ಬಂದಿಗಳು ಕಡಿತಗೊಳಿಸಿದರೂ ಮತ್ತೆ ಹಾಕಿಕೊಳ್ಳುತ್ತಿರುತ್ತಾರೆ ಎಂದು ತಿಳಿಸಲಾಯಿತು. | ಇದಕ್ಕೆ ಪ್ರತಿಕ್ರಿಯಿಸಿ ಅನಧಿಕೃತ ಸಂಪರ್ಕಗಳನ್ನು ಕಡಿತಗೊಳಿಸಲಾಗಿದ್ದು, ಮತ್ತೆ ಹಾಕಿಕೊಂಡಿರುವುದು ತಿಳಿದು ಬಂದಿದ್ದು ಸರ್ವಿಸ್ ಮೇನ್ ಅನ್ನು ಕಡಿತಗೊಳಿಸಲಾಗಿರುತ್ತದೆ ಎಂದು ತಿಳಿಸಲಾಯಿತು. |
| | | |

| | | |
|---|---|---|
| | **ಗ್ರಾಹಕರು– ದಯಕರ್ ಮಾಲಗಾರನಹಳ್ಳಿ 9663042721** | |
| | ...ಹೊಸದಾಗಿ ಕೊಳವೆಬಾವಿ ಕೊರೆಸಿದ್ದ, ಇದಕ್ಕೆ ಸಂಪರ್ಕ ಪಡೆಯಲು ನಮ್ಮೊಂದಿಗೆ 2017 ನೇ ಸಾಲಿನಲ್ಲಿ ಪಾವತಿಸಿರುವ ಒಬ್ಬರಿದ್ದು ಅವರೊಂದಿಗೆ ನಮಗೂ ಸಂಪರ್ಕ ಕಲ್ಪಿಸಲು ಕೋರಲಾಗಿತ್ತು. ಹಾಗೂ ಇದರೊಂದಿಗೆ ಮತ್ತೊಬ್ಬರು ಮೊತ್ತ ಪಾವತಿಸಲು ಸಿದ್ಧರಿದ್ದು ಈ ಪ್ರದೇಶಕ್ಕೆ ವಿದ್ಯುತ್ ಸರಬರಾಜು ಈವರೆಗೆ ಇರುವುದಿಲ್ಲ ಎಂದು ತಿಳಿಸಿದರು. | RUIP ಅನುದಾನವನ್ನು ನಿರೀಕ್ಷಿಸುತ್ತಿದ್ದು ಮಂಜುರಾತಿ ದೊರೆತ ತಕ್ಷಣ ಕಾರ್ಯದೇಶ ನೀಡಲಾಗುವುದು ಎಂದು ತಿಳಿಸಲಾಯಿತು |
| | **ಗ್ರಾಹಕರು– ಉಮೇಶ್ / ಕೆಂಪೇಗೌಡ ಅಜ್ಜಹಳ್ಳಿ 6361195784** | |
| 8 | MIP-9777, MIP-9810, 2/11/2016 ರಲ್ಲಿ ಹಣ ಪಾವತಿಸಿದ್ದು, ಅದರಲ್ಲಿ ನಾವು MIP-10039 24/1/2017 ರಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಮೂಲಭೂತ ಸೌಕರ್ಯ ಕಲ್ಪಿಸಲು ಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿ ಮುಂದಿನ ತಿಂಗಳಿನಲ್ಲಿ ಜೇಷ್ಠತಾ ಪಟ್ಟಿ ಅನುಸಾರ ಮೂಲಭೂತ ಸೌಕರ್ಯ ಕಲ್ಪಿಸಿ ಕೊಡಲಾಗುವುದು ಎಂದು ತಿಳಿಸಲಾಯಿತು. |

| ಕ್ರ.ಸಂಖ್ಯೆ | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರ ಸಲಹೆಗಳು |
|---|---|
| 1 | ದೂರುದಾರರು ಕೋರಿದ್ದಲ್ಲಿ ಸಭಾ ನಡಾವಳಿಯ ಪ್ರತಿಯನ್ನು ನೀಡಲು ಸೂಚಿಸಲಾಯಿತು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 1.30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ನಗರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಮು.ಕ